ಕವಿತೆ




## ಸುಬ್ಬು ಹೊಲೆಯಾರ್

ಕಲೆ: ವಿಶ್ವನಾಥ್ ಎ.ಎಸ್.






# ಗಾಳಿಯನ್ನು ತೊಳೆಯಲು ನೀರು ಹುಡುಕುತ್ತಿದ್ದೇನೆ

ಗಾಳಿಯನ್ನು ತೊಳೆಯಲು
ನೀರು ಹುಡುಕುತ್ತಿದ್ದೇನೆ
ನಾನು ಉಸಿರಾಡಿದ್ದರಿಂದ
ಮೈಲಿಗೆಯಾಗಿದೆಯಂತೆ ಭಾರತ
ಗಾಳಿಯನ್ನು ತೊಳೆಯಲು ನೀರು ಹುಡುಕುತ್ತಿದ್ದೇನೆ...

ಹುಡುಕುತ್ತಿದ್ದಾರೆ ಅಗ್ನಿಕುಂಡದಲ್ಲಿ
ಹೋಮ ಮಾಡಲಿಕ್ಕೆ ನನ್ನ ದೇಹವನ್ನು
ತಪ್ಪಿಸಿಕೊಳ್ಳುವುದಿಲ್ಲ ಹೇಡಿಗಳಂತೆ
ಬರೆದುಕೊಡುವುದಿಲ್ಲ ತಪ್ಪೊಪ್ಪಿಗೆ ಪತ್ರವನ್ನು
ಸ್ವಾತಂತ್ರ್ಯೆಯ ನಾನು

ನನ್ನ ಬಲಿ ಕೊಡದಿದ್ದರೆ ನೂರು ವರ್ಷಕ್ಕೆ
ಕಂಟಕವಂತೆ ಕಳಂಕವಂತೆ ಭರತವರ್ಷಕ್ಕೆ
ಬಾರಿಸುತ್ತಿದ್ದಾರೆ ಡಂಗುರ ಹಾದಿಬೀದಿಗಳಲ್ಲಿ
ಸ್ವಚ್ಛಭಾರತದ ಶಿಶು ನೀನು
ನನ್ನೆದೆಯ ತಿಂದುಂಡು ಮೆರೆದವರು
ಅಪವಿತ್ರವೆಂದು ನಿಂತನೆಲಕ್ಕೆ ತೀರ್ಥ ಚಿಮುಕಿಸುತ್ತಿದ್ದಾರೆ.